## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 58/2019

ಚಾಸಾ- 4 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 28-01-2026

| | | |
|---|---|---|
| ಹೆಸರು | : | ಮಹಾದೇವ |
| ತಂದೆಯ ಹೆಸರು | : | ಬಸಣ್ಣ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಸಹಾಯಕ ಕೃಷಿ ಅಧಿಕಾರಿ |
| ವಾಸಸ್ಥಳ | : | ಕಲಬುರಗಿ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2018 ರಲ್ಲಿ ನಾನು ಸಾರ್ವತ್ರಿಕ ವಿಧಾನಸಭಾ ಚುನಾವಣೆ ಪ್ರಯುಕ್ತ ಸೊನ್ನ ಚೆಕಪೋಸ್ಟ ಹತ್ತಿರ ನನಗೆ ಸಹಾಯಕ ಚೆಕಪೋಸ್ಟ ಆಫೀಸರ ಅಂತ ನಿಯೋಜನೆ ಮಾಡಿರುತ್ತಾರೆ.

ದಿಃ 11-05-2018 ರಂದು ರಾತ್ರಿ 9-50 ಗಂಟೆಗೆ ಅಫಜಲಪುರ ಕಡೆಯಿಂದ ಒಂದು ಕಾರು ಬಂದಿರುತ್ತದೆ. ಅದರ ಕಾರಿನ ಸಂಃ KA 32 D 5555 ಇರುತ್ತದೆ. ಆಗ ನಾನು ಚಾಸಾ 1, 5 ಮತ್ತು 6 ರವರು ಸದರಿ ಕಾರನ್ನು ನಿಲ್ಲಿಸಲು ಸೂಚಿಸಿರುತ್ತೇವೆ. ಆ ಕಾರಿನಲ್ಲಿ ಮೂರು ಜನರು ಇದ್ದರು. ಅವರಲ್ಲಿ ಸಿದ್ದಪ್ಪ ಮತ್ತು ಬಸಪ್ಪ ಎನ್ನುವವರ ಬಳಿ ಹಣ ದೊರೆತಿರುತ್ತದೆ. ರೂ. 200/- ಮುಖಬೆಲೆಯ ಒಟ್ಟು 100 ನೋಟುಗಳು ಮತ್ತು ಕೋಮಣ್ಣ ಎನ್ನುವವರ ಬಳಿ ರೂ.500/- ಮುಖಬೆಲೆಯ ಒಟ್ಟು 98 ನೋಟುಗಳು ಇದ್ದವು. ಒಟ್ಟು ಸದರಿ ಕಾರಿನಲ್ಲಿ ರೂ. 69000/- ಇದ್ದವು. ಸದರಿ ಹಣಕ್ಕೆ ಸಂಬಂಧಿಸಿದ ದಾಖಲಾತಿ ವಿಚಾರಿಸಿದಾಗ ಅವರು ಗುಲ್ಬರ್ಗಾದ ಫೈನಾನ್ಸದಿಂದ ತೆಗೆದುಕೊಂಡು ಬಂದು ಈಗ ಘತ್ತರಗಾ ಹೋಗಿ ಬಂದು ಈಗ ಹೈದ್ರಾ ದೇವಸ್ಥಾನಕ್ಕೆ ಹೋಗುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಚಾಸಾ 1 ರವರು ARO ರವರಿಗೆ ಕರೆಮಾಡಿ ಸದರಿ ವಿಷಯ ತಿಳಿಸಿರುತ್ತಾರೆ. ನಂತರ ಚಾಸಾ 2 ಮತ್ತು 3 ರವರು

ಗುನ್ಹೆಸ್ಥಳಕ್ಕೆ ಬಂದಿರುತ್ತಾರೆ. ಇವರುಗಳ ಸಮಕ್ಷಮ ಚಾಸಾ 1 ರವರು ಹಣವನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಖಾಕಿ ಕವರನಲ್ಲಿ ಇರುವ ಒಟ್ಟು ರೂ. 69000/- ಗಳನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ಮು.ಮಾ. **1** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ SJG ಪರವಾಗಿ RMS ವಕೀಲರಿಂದಃ-**

ಆರೋಪಿತರು ದಾಖಲಾತಿಗಳು ಕೇಳಿದರೂ ನೀಡಿರುವುದಿಲ್ಲ. ಜಪ್ತಿ ಪಡಿಸಿಕೊಂಡರು ಎಂದು ಹೇಳುವ ನೋಟುಗಳ ಸಂಖ್ಯೆಗಳನ್ನು ಹೇಳಲು ಬರುವುದಿಲ್ಲ. ಗುನ್ಹೆಸ್ಥಳದಲ್ಲಿ ಸಾರ್ವಜನಿಕರು ಯಾರೂ ಸೇರಿರಲಿಲ್ಲ. ಚಾಸಾ 1 ರವರು ARO ರವರಿಗೆ ಕರೆಮಾಡಿದಾಗ ಸಮಯ 9-55 ಆಗಿತ್ತು. ಚಾಸಾ 1 ರವರು ದೂರನ್ನು ನೀಡಿರುತ್ತಾರೆ. ಪೋಲಿಸರು ಗುನ್ಹೆಸ್ಥಳಕ್ಕೆ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಮರುದಿನ ಕರ್ತವ್ಯದಲ್ಲಿ ಇರಲಿಲ್ಲ.

ಕಚೇರಿ ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ